
ಇದು ಪ್ರಕಾಶ್ ಶೆಟ್ಟಿ ಪಂಚ್ 7
ಬರೀ
ವಾರೆ ಕೋರೆ
ಪ್ರತಿ ತಿಂಗಳು ವ್ಯಂಗ್ಯಚಿತ್ರ ಅಭ್ಯಾಸ ಪುಸ್ತಕ ಉಚಿತ!
ಶುದ್ಧ ತರ್ಲೆ ಮಾಸ ಪತ್ರಿಕೆ
ಆಗಸ್ಟ್ 2009 • ಬೆಲೆ ರೂ.20

# ಒಳಗೆ ಏನಿದೆ!

ನಾವೆಷ್ಟು ಸ್ವತಂತ್ರ್ಯರು? ಎಂದು ಅನಾವಶ್ಯಕವಾಗಿ ಯೋಚಿಸುತ್ತಾ ಕುಳಿತಾಗಲೇ 'ಹೌದಲ್ಲ, ನಾವೆಲ್ಲ ಸರ್ವ ಸ್ವತಂತ್ರರು' ಎಂಬ ಅಗೋಚರ ಸತ್ಯ ಅರಿವಾದದ್ದು. ನಮ್ಮ ದೇಶದಲ್ಲಿ ಸ್ವಾತಂತ್ರ್ಯವನ್ನು ದುರುಪಯೋಗಪ[illegible]ೇ ನಮ್ಮ ಕಣ್ಣೆದುರು ಬಂದು ನಿಂ[illegible]ಿ ಭಾರತ್ ಮಹಾನ್‌ನ ಹಣೆಬರಹ. ಈ ಹಣೆಬರಹವನ್ನೇ 'ಸ್ವಾತಂತ್ರ್ಯೋತ್ಸವ ಸ್ಪೆಶಲು' ಎಂದು ನಿಮ್ಮ ಮುಂದಿಟ್ಟಿದ್ದೇವೆ.

ತುಮಕೂರಿನಲ್ಲಿ ಹಾಸ್ಯಕ್ರಾಂತಿಯಾಗಿರುವ ವಿಚಾರ ಹಿರಿಯ ವ್ಯಂಗ್ಯಚಿತ್ರಕಾರ ಪ್ರಸನ್ನ ಅವರು ತಿಳಿಸಿದ್ದರು. ಮತ್ತೆ ನೋಡಿದರೆ ಉಡುಪಿ, ಕುಂದಾಪುರ, ಪುತ್ತೂರಿನಲ್ಲೂ ಅಂತಹ ನಗುವವರ ಕೂಟ ಇದೆಯೆಂದು ತಿಳಿಯಿತು. 'ಹಾರೆಕೋರೆ' ಬಳಗವೂ ಹೀಗೆ ರಾಜ್ಯದಲ್ಲೆಲ್ಲಾ ಬೆಳೆಯಬೇಕು. ಆ ಉದ್ದೇಶದಿಂದ ನಗುವವರ ಕೂಟಗಳ ಬಗ್ಗೆ ಈ ಲೇಖನ ಸೀರಿಯಸ್ಸಾಗಿಯೇ ಕೊರೆದಿದ್ದೇವೆ.

ಈ ಬಾರಿಯ 'ಅಂತೆಕಂತೆ'ಯಲ್ಲಿ ಬೆರಗುಗೊಳಿಸುವಂತಹ ಸತ್ಯಗಳಿವೆ. ಬೇಕಿದ್ದರೆ 'ಸ್ಕೂಪ್' ಅನ್ನಿ.

'ಹಾರೆಕೋರೆ' ಕಂಡಾಗ ಇಂಗ್ಲಿಷ್‌ನಲ್ಲೂ ಇರಬಾರದಿತ್ತೇ ಎಂದು ಕೆಲ ಯುವಕರಿಗೆ ಅನಿಸತೊಡಗಿದೆಯಂತೆ. ಅಂತಹವರು ಸದ್ಯ 45ನೇ ಪುಟದಲ್ಲಿ ಕೊಟ್ಟ ಬರಹ ಓದಿ (ಓದಿದ ಮೇಲೆ 'ಹಾರೆಕೋರೆ' ಕನ್ನಡದಲ್ಲೇ ಇರಲಿ ಎಂದು ನೀವು ಸಲಹೆ ನೀಡುತ್ತೀರಿ)

ಈ ಸಂಚಿಕೆಯಲ್ಲಿ ವ್ಯಂಗ್ಯಚಿತ್ರಕಾರರ ಭೀಷ್ಮ ಶಂಕರ್‌ಪಿಳ್ಳೆಯ ದಾಖಲೆ (ಕಲೆ)ಗಳಿವೆ. 'ಒಳ್ಳೆ ತಮಾಷೆ'ಯ ಪುಟ ವಿಸ್ತರಿಸಿದ್ದೇವೆ.




## 6 ಸ್ವತಂತ್ರರು ನಾವು ಸ್ವತಂತ್ರರು





## 12 ತಿಂಗಳ ಆಸ್ಸಾಮಿ ಕುಮಾರ ಸಂಭವ





## ನಾವ್ ನಗೋದಕ್ಕೆ ಹುಟ್ಟಿರೋದು 18





## 30 ಸತ್ಯ ಹರಿಶ್ಚಂದ್ರರು
ಅಂತೆ ಕಂತೆಗಳ ಸಂತೆಯಲ್ಲಿ





| | | | |
|---|---|---|---|
| ತಿತಾಪತಿ ರಘುಪತಿ | 10 | ಎಸ್‌ಎಸ್ ಆನಂದ್ ಗುದ್ದು | 34 |
| ಗೋಪಾಲ್ ಗೂಗ್ಲಿ | 14 | ಮಜಾಮಾಲ್ | 35 |
| ಮಗ್ಗು ಮಸಿ/ ಡಾ.ನರೇಂದ್ರ ರೈ ದೇರ್ಲ | 15 | ಒಳ್ಳೇ ತಮಾಷೆ | 36 |
| ಚಿತ್ರಾನ್ನ | 16 | ನಾಗನಾಥ್ ಬಾರಾಬಾತ್ | 38 |
| ಚಾನಲ್ ಅವಾಂತರ / ಅಮೃತ್ | 13 | ಪ್ರಾಸ ಗರಗಸ | 39 |
| ಕಾರ್ಟೂನ್ ಮಾಸ್ತರ್ | 21 | ಅಂಕು ಡೊಂಕು ಮ್ಯೂಸಿಯಂ | 40 |
| ಡಾ। ಗುಪ್ತ ಪರಿಹಾರ್ | 29 | ಬರೀ ರೀಲು | 42 |
| ಶ್ರೀಧರ್ ಚಿತ್ರಹಿಂಸೆ | 32 | ಪಟ ಪಟ/ಸಿಪಿಕೆ ಚಂದ್ರು | 44 |
| ಮೂರ್ಖರಾದಿರಿ ಜೋಕೆ | 33 | ಅಧಿಕ ಪ್ರಸಂಗ | 46 |



ನಮ್ಮಮ್ಮ ರಾಷ್ಟ್ರಪತಿ ಕಣ್ಲೋ!



ಬಾಲ್ಕನಿ ಸೀಟೇ ಬೇಕು.



ಓ ದೇವದಾಸ! ಸೋಡಾ ಮಿಕ್ಸ್ ಮಾಡೋ!

## ಎಂತಹ ಮರುಳಯ್ಯಾ ಇದು!



ಚಿನ್ನದ ಮೊಟ್ಟೆಯಿಡುವ ಕೋಳಿಯ ಕತೆ ಕೇಳಿ ಬಹಳ ವರ್ಷಗಳೇ ಆಗಿರಬೇಕಲ್ಲ. ಈಗ ಈ ಕೋಳಿಯ ಸೋಜಿಗದ ಕತೆ ಕೇಳಿ. ಉತ್ತರ ಕನ್ನಡದ ಹಳಿಯಾಳದಲ್ಲಿ ಎಲ್ಲಾ ಹೆಂಟೆಗಳಂತೆ ಇದೂ ಮೊಟ್ಟೆಗಳನ್ನಿಡುತ್ತಿತ್ತು. 3 ವರ್ಷಗಳಿಂದ ಕಾವು ಕೊಟ್ಟು ಮರಿ ಮಾಡುತ್ತಿತ್ತು. ಆದರೆ ಇದ್ದಕ್ಕಿದ್ದಂತೆ ಈ ಕೋಳಿರಾಣಿ ಮೊಟ್ಟೆಗಳನ್ನಿಡುವುದನ್ನು ನಿಲ್ಲಿಸಿಬಿಟ್ಟಿದ್ದಾಳೆ. ಅದು ಬಿಡಿ. ತಲೆಯ ಮೇಲೆ ಹುಂಜಕ್ಕಿರುವ ಶಿಂಗಾರವೂ ಬೆಳೆದಿದೆ! ಮನೆಯವರು ಕಣ್ಣುಜ್ಜಿ ಮತ್ತೆ ಮತ್ತೆ ನೋಡಿದರು. 'ಹುಂಜನ ತರ ಕಾಣ್ತಿಯಲ್ಲೇ!' ಅಂದರು. ಮರುದಿವಸ ಬೆಳ್ಳಂಬೆಳಗ್ಗೆ ಮನೆಯವರು ದಡಬಡನೆ ಎದ್ದು ಮತ್ತೆ ಕಣ್ಣುಜ್ಜಿಕೊಂಡು ಕೋಳಿಯ ಎದುರು ದಿಗ್ಭ್ರಮೆಯಿಂದ ನಿಂತುಕೊಂಡರು.

ಹೆಂಟೆ 'ಕೊ ಕೋ ಕೋ... ಕೋ....!' ಎಂದು ಥೇಟ್ ಹುಂಜ ತರಾನೇ ಕೂಗುತ್ತಿತ್ತು!

ಇದು ಯಾವುದೇ ಲಿಂಗ ಪರಿವರ್ತನೆ-ಕೇಸು ಅಲ್ಲ. ಕೋಳಿಯುಗವೋ ಕಲಿಯುಗವೋ ಅನ್ನಿ ಬೇಕಿದ್ದರೆ.

*ಕೃಪೆ : ಕರಾವಳಿ ಮುಂಜಾವು, ಕಾರವಾರ*